<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>

**ಸಿ.ಸಿ ಃ 272/2018**

**ಸಾಕ್ಷಿದಾರರ ಹೆಸರು ಃ ಶಿವಪ್ರಸಾದ್**

**ತಂದೆಯ ಹೆಸರು ಃಶೃಂಗೇಶ್ವರ್ ರಾವ್**

**ಪಿ.ಡಬ್ಲ್ಯೂ - 2**

**ವಯಸ್ಸು ಃ 36 ವರ್ಷ**

**ಉದ್ಯೋಗ ಃ ಶಾಖಾ ವ್ಯವಸ್ಥಾಪಕರು, ಹೆಚ್ ಡಿ ಎಫ್ ಸಿ ಬ್ಯಾಂಕ್**

**ವಾಸಸ್ಥಳ ಃ ಕಿಗ್ಗಾ**

**ದಿನಾಂಕಃ 24.01.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಃಃ ಮುಖ್ಯ ವಿಚಾರಣೆ ಃ ಫಿರ್ಯಾದುದಾರರ ಪರಃ ಶ್ರೀ. ಹೆಚ್ ಆರ್ ಯು ವಕೀಲರಿಂದ ಃಃ</u>**

ನಾನು ಕೊಪ್ಪ ಹೆಚ್ ಡಿ ಎಫ್ ಸಿ ಬ್ಯಾಂಕ್ ನಲ್ಲಿ ವ್ಯವಸ್ಥಾಪಕರಾಗಿ 11 ತಿಂಗಳಿನಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ನಿಪಿ-1 ಚೆಕ್ ಯಲಹಂಕ ನ್ಯೂ ಟೌನ್ ಹೆಚ್ ಡಿ ಎಫ್ ಸಿ ಬ್ಯಾಂಕ್ ಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿ. ನಿಪಿ-1 ಶ್ರೀ ಮಾತೃ ಕನ್ಸ್ಟ್ರಕ್ಷನ್ ರವರಿಗೆ ನೀಡಿದ ಚೆಕ್ ಆಗಿರುತ್ತದೆ. ಸದರಿ ಮಾತೃ ಕನ್ಸ್ಟ್ರಕ್ಷನ್ ಸಂಸ್ಥೆಯು ನೇತ್ರಾವತಿ ಆರ್ ರವರಿಗೆ ಸೇರಿರುತ್ತದೆ. ನಿಪಿ-1 ಚೆಕ್ ನಲ್ಲಿರುವ ಸಹಿ ಖಾತೆದಾರರ ಸಹಿಯು ನೇತ್ರಾವತಿಯವರದ್ದಾಗಿರುತ್ತದೆ. ಸದರಿ ಖಾತೆಯ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಖಾತೆದಾರರ ಮಾದರಿ ಸಹಿಗಳ ದಾಖಲೆಯನ್ನು, ಖಾತೆದಾರರ ವಿವರಗಳು, ಖಾತೆಯ ಮೋಡ್ ಆಫ್ ಆಪರೇಷನ್ ಗಳನ್ನು ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-8, ನಿಪಿ-9 ಮತ್ತು ನಿಪಿ-10 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಜಿ ಎಂ ವಕೀಲರಿಂದ ಃ</u>**

ಯಾವುದೇ ಚೆಕ್ಕು ಕಚೇರಿಗೆ ಬಂದಲ್ಲಿ ನಮ್ಮಲ್ಲಿರುವ ಸ್ಪೆಸಿಮನ್ ಸಹಿಗಳನ್ನು ತಾಳೆ ಮಾಡಿ ನೋಡಿರುತ್ತೇವೆಂದರೆ ಸರಿ. ನಿಪಿ-1 ಮತ್ತು 8 ರಲ್ಲಿ ತೋರಿಸಿರುವ ಸಹಿಗಳು ಒಬ್ಬ

ವ್ಯಕ್ತಿಯದ್ದಾಗಿರುತ್ತದೆ ಎಂದರೆ ಸರಿ. ಆರೋಪಿಗೂ ಮತ್ತು ನಿಪಿ-1 ಚೆಕ್ ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 24.01.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**